## ಸರ್ಕಾರಿ ನೌಕರನು ಉಪಯೋಗಿಸಿಕೊಂಡ ರಜೆ ಪ್ರಯಾಣ ರಿಯಾಯತಿಯ ವಿವರ ಮತ್ತು ಇತರ ವಿಶೇಷ ಮಾಹಿತಿಗಳು

### ನಮೂನೆ – 19

ಉನ್ನತ ವ್ಯಾಸಂಗಕ್ಕಾಗಿ / ವಿಶೇಷ ತರಬೇತಿಗಾಗಿ ಪ್ರತಿ ನಿಯೋಜನೆಯ ಮೇಲೆ ಹೋಗುವ ಸರ್ಕಾರಿ ನೌಕರನು ಬರೆದುಕೊಡಬೇಕಾದ ಬಂಧಪತ್ರ.

ಈ ಬಂಧಪತ್ರದ ಮೂಲಕ ಸಮಸ್ತರಿಗೂ ತಿಳಿಸುವುದೇನೆಂದರೆ:

.................................................... ಇಲಾಖೆ / ಕಛೇರಿಯಲ್ಲಿ ಸದ್ಯಕ್ಕೆ ................................ ಆಗಿ ನಿಯೋಜಿತನಾಗಿರುವ .......................................... ಜಿಲ್ಲೆಯ ............................ನ ನಿವಾಸಿಯಾದ [ಇನ್ನು ಮುಂದೆ 'ಕರಾರುದಾರ' ಎಂದು ಕರೆಯಲಾಗುವ] .................................... ಎಂಬ ನಾವು ಮತ್ತು [ಇಲ್ಲಿ ಇನ್ನು 'ಜಾಮೀನುದಾರ'ರೆಂದು ಕರೆಯಲಾಗುವ] ........................................ಅವರ ಮಗ / ಮಗಳಾ .................................... ಅವರು ಮತ್ತು ................................ ಅವರ ಮಗಳಾದ ......................... ಅವರು ಸರ್ಕಾರಿ ಸಾಲಗಳ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ದರಗಳಲ್ಲಿ ಬೇಡಿಕೆಯ ದಿನಾಂಕದಿಂದ ಅದರ ಮೇಲಿನ ಬಡ್ಡಿಯ ಸಹಿತ ............................. ರೂಗಳ ...................... [ರೂಗಳು ಮಾತ್ರ} ಮೊತ್ತವನ್ನು ಕೋರಿದಾಗ [ಇನ್ನು ಮುಂದೆ 'ಸರ್ಕಾರವೆಂದು ಕರೆಯಲಾಗುವ] ಕರ್ನಾಟಕದ ರಾಜ್ಯಪಾಲರಿಗೆ ಸಂದಾಯ ಮಾಡಲು ನಾವು ಮತ್ತು ನಮಗೆ ಸಂಬಂಧಿಸಿದ ನಮ್ಮ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು ಒಟ್ಟಾಗಿ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿ ಈ ಮೂಲಕ ಬದ್ಧರಾಗಿದ್ದೇವೆ. ಅಲ್ಲದೆ, ವಕೀಲರು ಮತ್ತು ಕಕ್ಷಿಗಾರರು ಎಲ್ಲ ವೆಚ್ಚಗಳನ್ನು ಸಂದಾಯ ಮಾಡಲಾಗುವುದು.

ಸರ್ಕಾರದ ಮೂಲಕ ಕರಾರುದಾರನು ಉನ್ನತ ವ್ಯಾಸಂಗ/ವಿಶೇಷ ತರಬೇತಿಗಾಗಿ ಪ್ರತಿ ನಿಯೋಜಿತವಾಗಿರುವುದರಿಂದ;

ಮತ್ತು ಸರ್ಕಾರದ ಉತ್ತಮ ಸಂರಕ್ಷಣೆಗಾಗಿ ಈ ಷರತ್ತುಗಳೊಂದಿಗೆ ಈ ಬಂಧಪತ್ರವನ್ನು ಬರೆದುಕೊಡಲು ಕರಾರುದಾರನು ಒಪ್ಪಿರುವುದರಿಂದ;

ಮತ್ತು ಮೇಲೆ ಹೇಳಿದ ಜಾಮೀನುದಾರರು ಮೇಲೆ ತಿಳಿಸಿದ ಕರಾರುದಾರ .............................. ಅವರ ಪರವಾಗಿ ಈ ಬಂಧಪತ್ರವನ್ನು ಬರೆದುಕೊಡಲು ಒಪ್ಪಿರುವುದರಿಂದ;

ಮೇಲೆ ತಿಳಿಸಿದ ಲಿಖಿತ ಕರಾರಿನ ಷರತ್ತುಗಳೇನೆಂದರೆ ಪ್ರತಿ ಯೋಜನೆಯ ಗಡುವು ಪೂರೈಸಿದ ನಂತರ ಅಥವಾ ಅವಧಿ ಮುಗಿದ ನಂತರ ಅಥವಾ ಕರ್ತವ್ಯಕ್ಕೆ ಅವನು ಹಿಂತಿರುಗಿದ ಮೂರು ವರ್ಷಗಳ ಅವಧಿಯೊಳಗೆ ಯಾವುದೇ ಸಮಯದಲ್ಲಿ ಕರ್ತವ್ಯಕ್ಕೆ ಹಿಂತಿರುಗದೆ ಸೇವೆಯನ್ನು ಪುನ: ವಹಿಸಿಕೊಳ್ಳಲು ತಪ್ಪಿದ ಅಥವಾ ಸೇವೆಗೆ ರಾಜೀನೆಮೆ ನೀಡಿದ ಅಥವಾ ಅನ್ಯಥಾ ಸೇವೆಯನ್ನು ಬಿಟ್ಟುಬಿಟ್ಟ ಸಂದರ್ಭದಲ್ಲಿ, ಕರಾರುದಾರನು ಮತ್ತು ಅವರ ಜಾಮೀನುದಾರರು ........................... ಸರ್ಕಾರದ ಸಾಲದ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ಬೇಡಿಕೆ ದಿನಾಂಕದಿಂದ ಅದೆ ಮೇಲಿನ ಬಡ್ಡಿಯೊಂದಿಗೆ ರೂಗಳ [........... ರೂಗಳು ಮಾತ್ರ] ಸದರಿ ಮೊತ್ತವನ್ನು ಕೋರಿದಾಗ, ಸರ್ಕಾರಕ್ಕೆ ಅಥವಾ ಸರ್ಕಾರದಿಂದ ನಿರ್ದೇಶಿಸಬಹುದಾದ ವ್ಯಕ್ತಿಗಳಿಗೆ ಕೂಡಲೇ ಸಂದಾಯ ಮಾಡತಕ್ಕದ್ದು.

ಪ್ರತಿ ನಿಯೋಜಿತನು ಅಧ್ಯಯನದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲವೆಂದು ಅಥವಾ ಸೂಕ್ತ ಸಮಯದಲ್ಲಿ ವ್ಯಾಸಂಗವನ್ನು ಪೂರೈಸಲು ತಪ್ಪಿದ್ದಾನೆಂದು ಸಕ್ಷಮ ಅಧಿಕಾರಿಗಳು ತೀರ್ಮಾನಿಸಿದ ಸಂದರ್ಭದಲ್ಲಿ ಕರಾರುದಾರನ ವೇತನದಿಂದ ಕರಾರುದಾರನ ಉನ್ನತ ವ್ಯಾಸಂಗ/ವಿಶೇಷ ತರಬೇತಿಗಾಗಿ ಮಾಡಿದ ವೆಚ್ಚವನ್ನು [ವೇತನ ಮತ್ತು ಭತ್ಯಗಳು, ಶಿಷ್ಟವೇತನ, ತುಟ್ಟಿಭತ್ಯ, ಶಿಕ್ಷಣ ಶುಲ್ಕ ಇತ್ಯಾದಿಗಳು ಒಳಗೊಂಡಂತೆ] ಸರ್ಕಾರವು ವಸೂಲಿ ಮಾಡುವುದು ವಿಧಿಸಮ್ಮತವಾಗಿರತಕ್ಕದ್ದು. ವೇತನದಿಂದ ಅದನ್ನು ವಸೂಲಿ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಸರ್ಕಾರದಿಂದ ವಹಿಸಲಾದ ವೆಚ್ಚದ ಸಂಪೂರ್ಣ ಮೊಬಲಗನ್ನು ಕರಾರುದಾರ ಮತ್ತು ಜಾಮೀನುದಾರರು ಒಟ್ಟಾಗಿ ಮತ್ತು ಪ್ರತ್ಯಕ್ಷವಾಗಿ ಮರು ಸಂದಾಯ ಮಾಡಲು ಬದ್ಧವಾಗಿರತಕ್ಕದ್ದು.

ಮತ್ತು ಮೇಲೆ ಹೇಳಿದ ಕರಾರುದಾರರಾದ ..................... ಮತ್ತು ಜಾಮೀನುದಾರರಾದ .................................... ಮತ್ತು / ಅಥವಾ .................................. ಅವರು ಸಂದಾಯವನ್ನು ಮಾಡಿದ ತರುವಾಯ ಮೇಲಿನ ಲಿಖಿತ ಕರಾರು ಶೂನ್ಯವಾಗತಕ್ಕದ್ದು ಮತ್ತು ಜಾರಿಗೆ ಬರತಕ್ಕುದಲ್ಲ. ಅನ್ಯಥಾ ಅದು ಸಂಪೂರ್ಣ ಜಾರಿಯಲ್ಲಿರತಕ್ಕದ್ದು.

ಪರಂತು, ಯಾವಾಗಲೂ ಸರ್ಕಾರ ಅಥವಾ ಅದರಿಂದ ಅಧಿಕೃತನಾದ ಯಾವುದೇ ವ್ಯಕ್ತಿಯ [ಜಾಮೀನುದಾರರ ಸಮ್ಮತಿ ಅಥವಾ ತಿಳಿವಳಿಕೆಯೊಂದಿಗೆ] ಅಥವಾ ಈ ಮೇರೆಗಿನ ಕಾಲನೀಡಿಕೆ ಅಥವಾ ಯಾವುದೇ ತ್ಯಜಿಸುವಿಕೆ, ಕೃತ್ಯ ಅಥವಾ ಲೋಪದ ಕಾರಣದಿಂದ ಜಾಮೀನುದಾರರ ದಾಯಿತ್ವವನ್ನು ಬಾಧಿತಗೊಳಿಸತಕ್ಕದ್ದಲ್ಲ ಅಥವಾ ವಿಮುಕ್ತಿಗೊಳಿಸತಕ್ಕದ್ದಲ್ಲ. ಇಲ್ಲವೇ, ಸರ್ಕಾರವು ಈ ಮೇರೆಗೆ ಬಾಕಿಯಿರುವ ಮೊಬಲಗಿಗಾಗಿ ಜಾಮೀನುದಾರರಾದ ........................ ಮತ್ತು .......................... ಅಥವಾ ಅವೆಲ್ಲ ಯಾರ ಮೇಲೆ ಆಗಲಿ ದಾವಾ ಹೂಡುವ ಮೊದಲು ಕರಾರುದಾರನ ಮೇಲೆ ದಾವೆ ಹೂಡುವುದು ಅವಶ್ಯಕವಾಗತಕ್ಕದ್ದು.

ಈ ಬಂಧಪತ್ರವು ಎಲ್ಲ ರೀತಿಯಿಂದಲೂ ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತದ ಕಾನೂನುಗಳಿಂದ ಪರಿಪಾಲಿತವಾಗಿರತಕ್ಕದ್ದು ಮತ್ತು ಇದರ ಮೇರೆಗಿನ ಹಕ್ಕುಗಳನ್ನು ಮತ್ತು ಇತರ ದಾಯಿತ್ವಗಳನ್ನು ಅವಶ್ಯವಿರುವಲ್ಲಿ ಭಾರತದಲ್ಲಿಯ ಸಮುಚಿತ ನ್ಯಾಯಾಲಯವು ಸಾರ ನಿರ್ಧರಿಸತಕ್ಕದ್ದು.

ಕರ್ನಾಟಕ ಸರ್ಕಾರವು ಈ ಬಂಧಪತ್ರದ ಮೇಲಿನ ಮುದ್ರಾಂಕ ಶುಲ್ಕವನ್ನು ವಹಿಸಲು ಸಮ್ಮತಿಸಿದೆ.

ಒಂದು ಸಾವಿರದ ಒಂಬೈನೂರ ......................................ನೆಯ ವರ್ಷದ ........................... ತಿಂಗಳ..................... ದಿನವಾದ ಇಂದು ಸಹಿ ಮಾಡಲಾಗಿದೆ. ............................ ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದೆ. ಕರಾರುದಾರ .................... ಅವರು ಸಹಿ ಮಾಡಿದ್ದಾರೆ.

ಸಾಕ್ಷಿಗಳು:

[1]

[2]

.............................. ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದ ಹೆಸರಿನ ಜಾಮೀನುದಾರರಾದ ..................................... ಅವರು ಸಹಿ ಮಾಡಿ ಒಪ್ಪಿಸಿರುತ್ತಾರೆ.

.............................. ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದ ಜಾಮೀನುದಾರರಾದ .......................... ಅವರು ಸಹಿ ಮಾಡಿ ಒಪ್ಪಿಸಿರುತ್ತಾರೆ.

ಸಾಕ್ಷಿಗಳು:

[1]

[2]

ಸ್ವೀಕರಿಸಲಾಗಿದೆ
ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಪರವಾಗಿ